# ನಿಮ್ಮೊಡನೆ

‘ಪಾಕಿಸ್ತಾನ ಭಯೋತ್ಪಾದಕರ ಅಡ್ಡೆ’ ಎಂದು ಭಾರತ ಹಲವಾರು ವರ್ಷಗಳಿಂದ ಹೇಳುತ್ತಲೇ ಬಂದಿದೆ. ಅದಕ್ಕೆ ಪೂರಕವಾದ ಸಾಕ್ಷ್ಯಗಳನ್ನೂ ಒದಗಿಸಿದೆ. ಅಮೆರಿಕಾ ಸೇರಿದಂತೆ ಜಗತ್ತಿನ ಪ್ರಮುಖ ರಾಷ್ಟ್ರಗಳು ಭಾರತದ ಮಾತುಗಳನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಈಗ ಎಲ್ಲಾ ರಾಷ್ಟ್ರಗಳಿಗೂ ಭಾರತದ ಆರೋಪ ನಿಜ ಎನ್ನುವುದು ಸಾಬೀತಾಗಿದೆ. ಇನ್ನು ಮುಂದಾದರೂ ಭಯೋತ್ಪಾದನೆ ನಿಗ್ರಹ ವಿಷಯದಲ್ಲಿ ಸಾಮೂಹಿಕ ಪ್ರಯತ್ನ ನಡೆಯಬೇಕು.



## ಕಲಿಯಬೇಕಾದ ಪಾಠಗಳು

ಒಸಾಮಾ ಬಿನ್ ಲಾಡೆನ್ ಹತ್ಯೆಯೊಂದಿಗೆ ಜಾಗತಿಕ ಭಯೋತ್ಪಾದನೆಯ ಕರಾಳ ಅಧ್ಯಾಯವೊಂದು ಕೊನೆಗೊಂಡಂತಾಗಿದೆ. ಒಸಾಮಾ ಹತ್ಯೆಯ ನಂತರ ಭಾರತವೂ ಸೇರಿದಂತೆ ಭಯೋತ್ಪಾದಕರ ಕೃತ್ಯಗಳಿಂದ ನಲುಗಿ ಹೋಗಿರುವ ಹಲವಾರು ದೇಶಗಳು ನೆಮ್ಮದಿಯ ನಿಟ್ಟುಸಿರು ಬಿಟ್ಟಿವೆ. ಒಸಾಮಾ ಹತ್ಯೆಯ ನಂತರ ಭಯೋತ್ಪಾದನೆ ಕೊನೆಗೊಳ್ಳಬಹುದೇ? ಉತ್ತರ ಹೇಳುವುದು ಕಷ್ಟ. ಒಸಾಮಾ ಹತ್ಯೆ ಹಲವಾರು ಪ್ರಶ್ನೆಗಳಿಗೆ ಉತ್ತರ ನೀಡಿದೆ. ಹಲವು ಹೊಸ ಪ್ರಶ್ನೆಗಳನ್ನೂ ಹುಟ್ಟು ಹಾಕಿದೆ. ಅಲ್‌ಖೈದಾ ಉಗ್ರರಿಗೆ ಆಶ್ರಯ ನೀಡಿದ್ದ ಪಾಕಿಸ್ತಾನದ ಬಣ್ಣ ಬಯಲಾಗಿದೆ. ಜಗತ್ತಿನ ಎದುರು ಅದು ಅಪರಾಧಿಯಂತೆ ತಲೆ ತಗ್ಗಿಸಿ ನಿಂತಿದೆ. ಪಾಕಿಸ್ತಾನ ನಂಬಿಕೆಗೆ ಅನರ್ಹ ದೇಶ ಎಂಬುದು ಇಡೀ ವಿಶ್ವಕ್ಕೆ ಮನವರಿಕೆಯಾಗಿದೆ. ಭಯೋತ್ಪಾದಕರಿಗೆ ಆಶ್ರಯ ಕೊಡುವುದೆಂದರೆ ಬೆಂಕಿಯನ್ನು ಸೆರಗಿನಲ್ಲಿ ಕಟ್ಟಿಕೊಂಡಂತೆ ಎಂಬುದು ಪಾಕಿಸ್ತಾನಕ್ಕೆ ಅರ್ಥವಾಗಿರಬಹುದು. ಇನ್ನಾದರೂ ಅದು ಪಾಠ ಕಲಿಯಬೇಕು. ಇಲ್ಲವಾದರೆ ಆ ದೇಶಕ್ಕೆ ಭವಿಷ್ಯ ಇಲ್ಲ.

ಭಯೋತ್ಪಾದಕರಿಗೆ ಕುಮ್ಮಕ್ಕು ಕೊಡುವ ಅನೇಕ ರಾಷ್ಟ್ರಗಳಿಗೂ ಒಸಾಮಾ ಹತ್ಯೆ ಎಚ್ಚರಿಕೆಯ ಗಂಟೆ. ಪಾಕಿಸ್ತಾನ ಸ್ವತಂತ್ರ ರಾಷ್ಟ್ರ. ದುರದೃಷ್ಟದ ಸಂಗತಿ ಎಂದರೆ, ಅದರ ಗಮನಕ್ಕೆ ಬಾರದಂತೆ ಅಮೆರಿಕಾ ಮಿಂಚಿನ ಮಿಲಿಟರಿ ಕಾರ್ಯಾಚರಣೆ ನಡೆಸಿ ಪಾತಕಿ ಒಸಾಮಾನನ್ನು ಸದೆಬಡಿಯಿತು. ಈ ಕಾರ್ಯಾಚರಣೆ ಬಗ್ಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ. ಅದೇನೇ ಇದ್ದರೂ, ಈ ಕಾರ್ಯಾಚರಣೆ ಸಮರ್ಥನೀಯ ಅಲ್ಲ. ಆದರೆ ಅಮೆರಿಕಾಕ್ಕೆ ಬೇರೆ ದಾರಿಯೂ ಇರಲಿಲ್ಲ. ಪಾಕಿಸ್ತಾನದ ಇಬ್ಬಗೆಯ ಧೋರಣೆಯೇ ಈ ಬೆಳವಣಿಗೆಗೆ ಕಾರಣವಾಯಿತು. ಆ ದೇಶದ ನಾಯಕರು ಅದನ್ನು ಅರ್ಥ ಮಾಡಿಕೊಳ್ಳಬೇಕು. ಭಯೋತ್ಪಾದನೆಯ ನಿಗ್ರಹಕ್ಕೆ ಸಹಕಾರ ಕೊಡುತ್ತೇವೆ ಎಂದು ಹೇಳುತ್ತಲೇ ತೆರೆಮರೆಯಲ್ಲಿ ಒಸಾಮಾ ಹಾಗೂ ಇನ್ನಿತರ ಅಸಂಖ್ಯಾತ ಭಯೋತ್ಪಾದಕರಿಗೆ ಆಶ್ರಯ ನೀಡಿ  ಅಮಾಯಕನಂತೆ ವರ್ತಿಸುತ್ತಿದ್ದ ಪಾಕಿಸ್ತಾನ ದೊಡ್ಡ ಬೆಲೆಯನ್ನೇ ತೆತ್ತಿದೆ. ಅಮೆರಿಕಾದಿಂದ ಭಾರೀ ಆರ್ಥಿಕ ನೆರವು ಪಡೆದೂ ಆ ದೇಶಕ್ಕೆ ಬೇಕಾಗಿದ್ದ ಭಯೋತ್ಪಾದಕರಿಗೆ ಆಶ್ರಯ ಕೊಟ್ಟಿದ್ದರಿಂದ ಪಾಕಿಸ್ತಾನಕ್ಕೆ ತನ್ನ ಸಾರ್ವಭೌಮತೆಯನ್ನು ಒತ್ತೆ ಇಡುವಂತಹ ಪರಿಸ್ಥಿತಿ ಬಂತು. ಈ ಬೆಳವಣಿಗೆಯಿಂದ  ಪಾಕಿಸ್ತಾನ ಮಾತ್ರವಲ್ಲ ಅನೇಕ ರಾಷ್ಟ್ರಗಳು ಪಾಠ ಕಲಿಯಬೇಕಿದೆ. ಇನ್ನಾದರೂ ಭಯೋತ್ಪಾದನೆಯನ್ನು ಕೊನೆಗೊಳಿಸಲು ಭಾರತ, ಅಮೆರಿಕಾ ಹಾಗೂ ಇತರ ರಾಷ್ಟ್ರಗಳ ಜತೆ ಪಾಕಿಸ್ತಾನ ಕೈಜೋಡಿಸಬೇಕು. ಮಾತು ಹಾಗೂ ನಡವಳಿಕೆಗಳಲ್ಲಿ ಅದು ಪಾರದರ್ಶಕವಾಗಿರಬೇಕು.

‘ಪಾಕಿಸ್ತಾನ ಭಯೋತ್ಪಾದಕರ ಅಡ್ಡೆ’ ಎಂದು ಭಾರತ ಹಲವಾರು ವರ್ಷಗಳಿಂದ ಹೇಳುತ್ತಲೇ ಬಂದಿದೆ. ಅದಕ್ಕೆ ಪೂರಕವಾದ ಸಾಕ್ಷ್ಯಗಳನ್ನೂ ಒದಗಿಸಿದೆ. ಅಮೆರಿಕಾ ಸೇರಿದಂತೆ ಜಗತ್ತಿನ ಪ್ರಮುಖ ರಾಷ್ಟ್ರಗಳು ಭಾರತದ ಮಾತುಗಳನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಈಗ ಎಲ್ಲಾ ರಾಷ್ಟ್ರಗಳಿಗೂ ಭಾರತದ ಆರೋಪ ನಿಜ ಎನ್ನುವುದು ಸಾಬೀತಾಗಿದೆ. ಇನ್ನು ಮುಂದಾದರೂ ಭಯೋತ್ಪಾದನೆ ನಿಗ್ರಹ ವಿಷಯದಲ್ಲಿ ಸಾಮೂಹಿಕ ಪ್ರಯತ್ನ ನಡೆಯಬೇಕು. ಪಾಕಿಸ್ತಾನದಲ್ಲಿ ಅಡಗಿ ಕುಳಿತಿರುವ ಪಾತಕಿಗಳನ್ನು ಹಿಡಿದು ಶಿಕ್ಷಿಸಬೇಕು. ಅದಕ್ಕೆ ಪಾಕಿಸ್ತಾನ ಸಹಕರಿಸದಿದ್ದರೆ ಆ ದೇಶಕ್ಕೆ ನೀಡುತ್ತಿರುವ ನೆರವನ್ನು ತಕ್ಷಣ ನಿಲ್ಲಿಸಬೇಕು. ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಳ್ಳಬೇಕು. ಇದು ಅನಿವಾರ್ಯ. ಇಲ್ಲವಾದರೆ ಒಸಾಮಾನಂತಹ ಶನಿ ಸಂತಾನಗಳು ದೊಡ್ಡ ಪ್ರಮಾಣದಲ್ಲಿ ದುಷ್ಕೃತ್ಯಗಳನ್ನು ಎಸಗುವ ಸಾಧ್ಯತೆ ಇದೆ. ಅಮೆರಿಕಾ ಒಸಾಮಾಗೆ ತಕ್ಕ ಪಾಠ ಕಲಿಸಿದೆ. ಹಾಗೇ ಮುಂಬೈ ದಾಳಿ ಸೇರಿದಂತೆ ಭಾರತದಲ್ಲಿ ಹಲವು ದುಷ್ಕೃತ್ಯಗಳನ್ನು ನಡೆಸಿದ ಪಾತಕಿಗಳಿಗೂ ಶಿಕ್ಷೆ ಆಗಬೇಕು. ಪಾಕಿಸ್ತಾನದಲ್ಲಿರುವ ದಾವೂದ್ ಇಬ್ರಾಹಿಂ ಹಾಗೂ ಇತರ ಪಾತಕಿಗಳನ್ನು ಭಾರತಕ್ಕೆ ಒಪ್ಪಿಸುವಂತೆ ವಿಶ್ವ ಸಮುದಾಯ ಆ ದೇಶದ ಮೇಲೆ ಒತ್ತಡ ತರಬೇಕು.

ಪಾಕಿಸ್ತಾನ ಕಳೆದ ಐದಾರು ದಶಕಗಳಲ್ಲಿ ಭಾರತದೊಂದಿಗೆ ದ್ವೇಷ ಸಾಧಿಸುವ ಹೊರತು ಬೇರೆ ಏನನ್ನೂ ಮಾಡುತ್ತಿಲ್ಲ. ಭಾರೀ ಮೊತ್ತದ ವಿದೇಶಿ ನೆರವು ಪಡೆದು ತನ್ನ ಮಿಲಿಟರಿ ಬಲ ಹೆಚ್ಚಿಸಿಕೊಳ್ಳುವತ್ತ ಗಮನ ಕೊಟ್ಟಿದೆ. ಭಯೋತ್ಪಾದಕರು ಮತ್ತು ಮೂಲಭೂತವಾದಿ ಸಂಘಟನೆಗಳ ಕೈಗೊಂಬೆಯಂತೆ ವರ್ತಿಸುವ ಆ ದೇಶದ ನಾಯಕರ ಸಂಕುಚಿತ ಧೋರಣೆಗಳಿಂದ ಭಾರತ ಹಾಗೂ ಉಪಖಂಡದ ನೆಮ್ಮದಿ ಹಾಳಾಗಿದೆ. ಈ ಬೆಳವಣಿಗೆ ದುರದೃಷ್ಟಕರ. ಇದಕ್ಕೆ ಅಂತ್ಯ ಹೇಳಬೇಕು. ಇನ್ನಾದರೂ ಪಾಕಿಸ್ತಾನ ಭಯೋತ್ಪಾದಕರಿಗೆ ಉತ್ತೇಜನ ಕೊಡುವುದನ್ನು ಬಿಡಬೇಕು.

■ ಪ್ರೇಮಕುಮಾರ್ ಹರಿಯಬ್ಬೆ